ದಿನಾಂಕ:**01-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ಸಾಕ್ಷಿಯು 2 ಗಾಂಜಾಸೇದುವ ಕೊಳವೆಗಳನ್ನು ನೋಡಿ ಗುರುತಿಸಿದ್ದು ಅದನ್ನುಮು.ಮಾ-5 ಮತ್ತು 6 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ದಿ:27-09-2021 ರಂದು ಮದ್ಯಾಹ್ನ 12-15 ನಿಮಿಷದ ಸುಮಾರಿಗೆ ನಮ್ಮ ಠಾಣೆಯ ಪಿ.ಐ ಅಂದರೆ ಚಾಸ-1 ರವರು ನನಗೆ, ತಮಗೆ ಬಂದ ಮಾಹಿತಿಯನ್ನು ತಿಳಿಸಿರುತ್ತಾರೆ. ನನ್ನ ಜೊತೆ ನಮ್ಮ ಠಾಣೆಯ ಸಿಬ್ಬಂಧಿ ಮತ್ತು ಪಂಚರನ್ನು ಕೂಡ ಕರೆದುಕೊಂಡು ಹೋಗಿದ್ದೆವು. ನಾವು ಹೋದ ಸ್ಥಳ ಸರ್ವೆ ನಂ 32 ಇರಬಹುದು ದಾಖಲೆ ನೋಡದೆ ಸರಿಯಾಗಿ ಹೇಳಲು ಬರುವುದಿಲ್ಲ, ಅದರ ಓನರ್ ಯಾರು ಎಂದು ನನಗೆ ತಿಳಿದಿಲ್ಲ. ನಾವು ಗುನ್ನಾ ಸ್ಥಳಕ್ಕೆ ಹೋದಾಗ 12-30 ಆಗಿರಬಹುದು, ಸರಿಯಾಗಿ ನೆನಪಿಲ್ಲ. ಇಲಾಖಾ ವಾಹನದಲ್ಲಿ ಸ್ಥಳಕ್ಕೆ ಹೋಗಿದ್ದೇವೆ ನನಗೆ ಚಾಲಕನ ಹೆಸರು ಈಗ ನೆನಪಿಲ್ಲ. ನಾನು ಚಾಸಾ-1 ಇವರೊಂದಿಗೆ ಯಾವುದೇ ದಾಳಿಗೆ ಹೋಗಿಲ್ಲ ಆರೋಪಿಯು ಯಾವುದೇ ಗಾಂಜಾ ಮಾರಾಟ ಮಾಡುತ್ತಿರಲಿಲ್ಲ ನಾವು ಆತನ ಕಡೆಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆರೋಪಿಗಳನ್ನು ಒಟ್ಟಾಗಿ ಸೇರಿ ಹಿಡಿದಿದ್ದೇವೆ ಇಂತಹದ್ದೇ ವ್ಯಕ್ತಿಯನ್ನು ಹಿಡಿದಿದ್ದೇವೆ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ. ಮು.ಮಾ-5 ಮತ್ತು 6 ಗಳನ್ನು 1 ನೇ ಆರೋಪಿ ಕಡೆಯಿಂದ ಅಮಾನತ್ತುಪಡಿಸಿಕೊಳ್ಳಲಾಯಿತು. ಮು.ಮಾ-5 ರ ಕೆಂಪು ಬಣ್ಣದ ಕೊಳವೆ ಇನ್ನೂ ಉಪಯೋಗ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮು.ಮಾ-1 ರಿಂದ 6 ಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮು.ಮಾಲುಗಳನ್ನು ಆರೋಪಿಗಳ ಕಡೆಯಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕೆ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.